# ಶ್ರೀಮಾತೆಯವರ ನೆನಪುಗಳು

ಬಂಗಾಳಿ ಮೂಲ: ಸ್ವಾಮಿ ನಿರ್ವಾಣಾನಂದ

ಅನುವಾದ : ಸ್ವಾಮಿ ಜ್ಞಾನಯೋಗಾನಂದ

೧೯೧೨ರಲ್ಲಿ ನಾನು ಕಾಶಿ ಸೇವಾಶ್ರಮದಲ್ಲಿ ಬ್ರಹ್ಮಚಾರಿಯಾಗಿ ಸೇರಿಕೊಂಡೆ. ಆಗ ಅಲ್ಲಿ ಮಹಾರಾಜ್(ಸ್ವಾಮಿ ಬ್ರಹ್ಮಾನಂದರು), ಮಹಾಪುರುಷ ಮಹಾರಾಜ್ (ಸ್ವಾಮಿ ಶಿವಾನಂದರು), ಹರಿ ಮಹಾರಾಜ್ (ಸ್ವಾಮಿ ತುರೀಯಾನಂದರು) ಹಾಗೂ ಮಾಸ್ಟರ್ ಮಹಾಶಯರು (ಮ) ಅಲ್ಲಿದ್ದರು. ಶ್ರೀಮಾತೆಯವರೂ ಆಗ ಅಲ್ಲಿದ್ದರು — ಕಾಶಿಯ 'ಲಕ್ಷ್ಮೀನಿವಾಸ'ದಲ್ಲಿದ್ದರು. ಅದೇ ಸಂದರ್ಭದಲ್ಲಿ ಒಂದು ದಿನ ಶ್ರೀಮಾತೆಯವರನ್ನು ಪಲ್ಲಕ್ಕಿಯ ಮೂಲಕ ಸೇವಾಶ್ರಮಕ್ಕೆ ಕರೆದುಕೊಂಡು ಬಂದರು. ಅವರೊಂದಿಗೆ ಸ್ವಾಮಿ ಶಾಂತಾನಂದರು ಹಾಗೂ ಚಾರುಬಾಬು (ಮುಂದೆ ಸ್ವಾಮಿ ಶುಭಾನಂದರು) ಇದ್ದರು. ಶ್ರೀಮಾತೆಯವರು ಒಂದು ಕುರ್ಚಿಯಲ್ಲಿ ಕುಳಿತರು. ಒಬ್ಬ ಭಕ್ತ ಕೇಳಿದ, ''ಅಮ್ಮಾ, ಎಲ್ಲವನ್ನೂ ಹೇಗೆ ಕಂಡಿರಿ?''. ಶ್ರೀಮಾತೆ ಉತ್ತರಿಸಿದರು, ''ನೋಡಿದೆ, ಶ್ರೀರಾಮಕೃಷ್ಣರೇ ವಿರಾಜಮಾನರಾಗಿದ್ದಾರೆ. ರೋಗಿಗಳನ್ನು ಸಾಕ್ಷಾತ್ ನಾರಾಯಣನೆಂಬ ಭಾವದಿಂದಲೇ ಮಕ್ಕಳೆಲ್ಲ (ಸಂನ್ಯಾಸೀ ಶಿಷ್ಯಂದಿರೆಲ್ಲ) ಅವರ ಸೇವೆ ಮಾಡುತ್ತಿದ್ದಾರೆ.'' ಶ್ರೀಮಾತೆಯವರ ಈ ಮಾತುಗಳನ್ನು ಕೇಳಿದಾಗ ನಮ್ಮೊಳಗೆ ಇನ್ನಷ್ಟು ಪ್ರೇರಣೆ ಉಂಟಾಯಿತು. ಆಗ ಸೇವಾಶ್ರಮದಲ್ಲಿ ಸಾಧು-ಬ್ರಹ್ಮಚಾರಿಗಳ ಸಂಖ್ಯೆ ಕಡಿಮೆಯಿತ್ತು. ಒಳರೋಗಿಗಳ ಸೇವೆಯ ಭಾರವನ್ನು ನಮಗೆ ಒಪ್ಪಿಸಲಾಗಿತ್ತು. ನಾರಾಯಣ ಭಾವದಿಂದ ಸೇವೆ ಮಾಡುವುದು ವಾಸ್ತವಿಕ ನೆಲೆಯಲ್ಲಿ ಭಾರೀ ಕಷ್ಟ. ಒಂದೆರಡು ವರ್ಷಗಳಿಂದ ನಾನು ಸೇವಾಶ್ರಮದಲ್ಲೇ ಇದ್ದೆ. ನಾರಾಯಣ ಭಾವದಿಂದ ರೋಗಿಗಳ ಸೇವೆ ಮಾಡಲು ನಾನು ಬಹಳ ಪ್ರಯತ್ನ ಮಾಡಿದ್ದೆ. ಶ್ರೀಮಾತೆಯವರ ಮಾತುಗಳ ಶಕ್ತಿ, ರಾಜಾ ಮಹಾರಾಜರ ಉತ್ಸಾಹ, ಹರಿ ಮಹಾರಾಜರ ಪ್ರೇರಣೆ — ಇವುಗಳಿಂದಲೇ ನನಗೆ ಹಾಗೆ ಸೇವೆ ಮಾಡಲು ಸಾಧ್ಯವಾಗಿತ್ತು.

ಕಾಶಿಯಲ್ಲಿ , ಬಾಗ್‌ಬಜಾರಿನಲ್ಲಿ ಹಾಗೂ ಬೇಲೂರು ಮಠದಲ್ಲಿ ರಾಜಾ ಮಹಾರಾಜರು ಶ್ರೀಮಾತೆಯವರಿಗೆ ಪ್ರಣಾಮ ಮಾಡಿದ್ದನ್ನು ಕಾಣುವ ಸೌಭಾಗ್ಯ ಅನೇಕ ಬಾರಿ ನನಗೆ ಒದಗಿಬಂದಿದೆ. ಅವರು ಶ್ರೀಮಾತೆಯವರ ಮುಂದೆ ಏನೋ ಒಂದು ರೀತಿ ಆಗಿಬಿಡುತ್ತಿದ್ದರು, ಭಾವುಕರಾಗಿಬಿಡುತ್ತಿದ್ದರು. ಸ್ಥಿರವಾಗಿ ನಿಲ್ಲಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಕಾಲುಗಳು ಅಲುಗಾಡುತ್ತಿದ್ದವು; ದೇಹ ಥರಥರ ನಡುಗುತ್ತಿತ್ತು. ಹೇಗೋ ಪ್ರಣಾಮ ಮಾಡಿ ಎದ್ದುಬಿಡುತ್ತಿದ್ದರು. ಅನೇಕ ಸಲ ಕಾಶಿಯಲ್ಲಿ ಹಾಗೂ 'ಉದ್ಬೋಧನ'ದಲ್ಲಿ ಪ್ರಣಾಮ ಮಾಡುವುದಕ್ಕಾಗಿ ಮೇಲಂತಸ್ತಿಗೆ



ಬರಲಾಗುತ್ತಿರಲಿಲ್ಲ; ಕೆಳಗಿನಿಂದಲೇ ಎರಡೂ ಕೈಗಳನ್ನು ಜೋಡಿಸಿ ತಲೆಯ ಮೇಲಿಟ್ಟು , ಪ್ರಣಾಮ ಮಾಡಿದ್ದಾಗಿ ತಿಳಿಸುತ್ತಿದ್ದರು. ಬಾಬುರಾಮ ಮಹಾರಾಜ್, ಮಹಾಪುರುಷ ಮಹಾರಾಜ್ ಮುಂತಾದವರು ಕೂಡ ಶ್ರೀಮಾತೆಯವರಿಗೆ ಪ್ರಣಾಮ ಮಾಡುವುದನ್ನು ನಾನು ನೋಡಿದ್ದೇನೆ. ಅವರಿಗೂ ಅದೇ ರೀತಿಯ ಭಾವಾವಸ್ಥೆ ಉಂಟಾಗುತ್ತಿತ್ತು. ಆದರೆ ಇವರಷ್ಟು ಇರುತ್ತಿರಲಿಲ್ಲ.

೧೯೧೪ರಲ್ಲಿ ಬ್ರಹ್ಮಚರ್ಯ ದೀಕ್ಷೆಯಾದ ನಂತರ ನಾನು ಶ್ರೀಮಾತೆಯವರ ಆಶೀರ್ವಾದ ಪಡೆಯಲು 'ಉದ್ಬೋಧನ'ಕ್ಕೆ ಹೋದೆ. ಆಗ ಶ್ರೀಮಾತೆಯವರ ಕೋಣೆಯ ಮುಂಭಾಗದಲ್ಲಿ ಈಗಿನಂತೆ ದೊಡ್ಡ ವರಾಂಡ ಇರಲಿಲ್ಲ. ಮೆಟ್ಟಿಲು ಹತ್ತಿ ಹೋದೊಡನೆಯೆ ಒಂದು ಕಿರಿದಾದ ವರಾಂಡವಿತ್ತು, ಅಷ್ಟೆ. ಆಗ ಕೆಳ ಅಂತಸ್ತಿನ ಅಂಗಣವು ದೊಡ್ಡದಾಗಿತ್ತು. ಶ್ರೀಮಾತೆಯವರಿಗೆ ಪ್ರಣಾಮ ಮಾಡಿದಾಗ, ಅವರು ಕೆಲವೊಂದು ಭಜನೆ ಹಾಡಲು ಹೇಳಿದರು. ಅಂಗಣದಲ್ಲಿ ರತ್ನಗಂಬಳಿ ಹಾಸಿ, ಅಲ್ಲಿ ಚೆನ್ನಾಗಿ ಭಜನೆ ಹಾಡಿದೆ. ಶ್ರೀಮಾತೆಯವರು ಸಂತೋಷಗೊಂಡು, ಪ್ರಸಾದವನ್ನು ಕಳುಹಿಸಿಕೊಟ್ಟರು. ಬೇಲೂರು ಮಠಕ್ಕೆ ಮರಳುವ ಮುನ್ನ ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಹೋದೆ. ಅವರು ನನ್ನ ತಲೆಯ ಮೇಲೆ ಕೈಯಿಟ್ಟು ಚೆನ್ನಾಗಿ ಆಶೀರ್ವಾದ ಮಾಡಿದರು.

೧೯೧೫ರ ಮಾರ್ಚ್–ಏಪ್ರಿಲ್ ಇರಬೇಕು. ಆಗ ನಾನು ರಾಜಾ ಮಹಾರಾಜರ ಸೇವೆ ಮಾಡಲು ಬೇಲೂರು ಮಠದಲ್ಲೇ ಇದ್ದೆ. ನಾನು ಗಮನಿಸಿದೆ — ನನ್ನ ವಯಸ್ಸಿನ ಅನೇಕ ಮಂದಿ ಸಾಧು, ಬ್ರಹ್ಮಚಾರಿಗಳು ರಾಜಾ ಮಹಾರಾಜರ ಅನುಮತಿಯೊಂದಿಗೆ ತಪಸ್ಸು ಮಾಡಲು ಹೋಗುತ್ತಿದ್ದರು. (ಸಾಮಾನ್ಯವಾಗಿ ರಾಮಕೃಷ್ಣ ಮಠ–ಮಿಷನ್ನಿನ ಸಾಧುಗಳು ಒಂದೆರಡು ತಿಂಗಳೋ, ಕೆಲವು ದಿನಗಳೋ ತಪಸ್ಸು ಮಾಡಲು ಹರಿದ್ವಾರ, ಹೃಷೀಕೇಶ ಅಥವಾ ಇನ್ನಾವುದಾರೂ ತೀರ್ಥಕ್ಷೇತ್ರಗಳಿಗೆ ಹೋಗಿ ಏಕಾಂತವಾಗಿ ಸಾಧನೆ ಮಾಡುತ್ತಾರೆ.) ಒಂದು ದಿನ ನಾನು ಮಹಾರಾಜರ ಬಳಿಗೆ ಹೋಗಿ, ತಪಸ್ಸಿಗೆ ಹೋಗಲು ಅನುಮತಿ ಕೇಳಿದೆ. ಅವರು ಕೂಡಲೇ ನನ್ನನ್ನು ಕೇಳಿದರು: ''ಹಾಗಿದ್ದರೆ ನೀನು ಇಲ್ಲಿ ಏನು ಮಾಡುತ್ತಿದ್ದೀಯಂತೆ? ತಪಸ್ಸಿಗೆ ಹೋಲಿಸಿದರೆ, ನೀನು ಇಲ್ಲಿ ಮಾಡುವ ಸೇವೆಯಿಂದಾಗಿ ಹೆಚ್ಚಿನ ಲಾಭ ವುಂಟಾಗುವುದು. ನೀನು ಇನ್ನೆಲ್ಲಿಗೂ ಹೋಗುವ ಅಗತ್ಯವಿಲ್ಲ.'' ಹಾಗಿದ್ದೂ ನಾನು ಅವರನ್ನು ಪದೇ ಪದೇ ಅದಕ್ಕಾಗಿ ಪೀಡಿಸತೊಡಗಿದೆ. ಅವರು ನನ್ನನ್ನು ಮಹಾಪುರುಷ ಮಹಾರಾಜರ ಬಳಿಗೆ ಕಳುಹಿಸಿ, ಅವರಿಂದ ಅನುಮತಿ ಪಡೆಯಲು ಹೇಳಿದರು. ಮಹಾಪುರುಷ ಮಹಾರಾಜರು ನನ್ನ ಮಾತನ್ನು ಕೇಳಿ ನನಗೆ ಹೇಳಿದರು, ''ನಿನಗೇನು ಹುಚ್ಚೆ? ತಪಸ್ಸು ಮಾಡಲು ಇನ್ನೆಲ್ಲಿಗೆ ಹೋಗುತ್ತಿ? ಮಹಾರಾಜರ ಸೇವೆ ಮಾಡುತ್ತಿದ್ದೀಯಲ್ಲ , ಅದರಿಂದಲೇ ನಿನಗೆ ಎಲ್ಲ ಜ್ಞಾನವೂ ಬರುವುದು.'' ಆಗ ನಾನು ಇನ್ನಷ್ಟು ಒತ್ತಾಯಿಸತೊಡಗಿದೆ. ಆಗ ಅವರೆಂದರು: ''ಸರಿ, ಬಾಬುರಾಮನ (ಸ್ವಾಮಿ ಪ್ರೇಮಾನಂದರ) ಬಳಿಗೆ ಹೋಗು. ಅವರು ಅನುಮತಿ ಕೊಟ್ಟರೆ ಆಗ ನೀನು ಹೋಗಬಹುದು.'' ನಾನು ಬಾಬುರಾಮ ಮಹಾರಾಜರ ಬಳಿಗೆ ಹೋದೆ. ನನ್ನ ವಿಜ್ಞಾಪನೆಯನ್ನು ಕೇಳಿ, ಅವರೂ ಅದೇ ಉತ್ತರ ನೀಡಿದರು. ಆದರೆ ಅವರ ಮಾತುಗಳು ಇನ್ನಷ್ಟು ಶಕ್ತಿಯುತವಾಗಿದ್ದವು. ಅವರೆಂದರು, ''ಸೂರ್ಯ, ನಿಜವಾಗಿಯೂ ನಿನಗೆ ಹುಚ್ಚು ಹಿಡಿದಿದೆಯೆ? ಮಹಾರಾಜರ ಅಂತರ್ಯದಲ್ಲಿ ಠಾಕೂರರೇ ಇರುವುದನ್ನು ನೀನು ನೋಡುತ್ತಿಲ್ಲವೆ? ನೀನು ಇನ್ನೆಲ್ಲಿಗೆ ಹೋದರೂ, ನಿನಗೆ ಭಗವಂತನ ಮಾನಸಪುತ್ರರ ನೇರ ಸಾನ್ನಿಧ್ಯ ಲಭಿಸುವುದೆ?'' ಅಷ್ಟಾದರೂ, ನಾನು ಇನ್ನೂ ಹಠ ಮಾಡಿದೆ. ಆಗ ಅವರೆಂದರು: ''ಸರಿ ಹಾಗಾದರೆ. 'ಉದ್ಬೋಧನ'ದಲ್ಲಿ ಶ್ರೀಮಾತೆಯವರಿದ್ದಾರೆ. ಶ್ರೀಮಾತೆಯವರು ಒಂದು ವೇಳೆ ಅನುಮತಿ ನೀಡಿದರೆ, ನೀನು ಹೋಗು. ಮೊದಲು ನೀನು ಕಾಳೀಘಾಟ್‌ಗೆ ಹೋಗಿ, ಕಾಳೀಮಾತೆಗೆ ಪೂಜೆ ಮಾಡು. ಅನಂತರ ಆಶೀರ್ವಾದ ಪಡೆಯಲು ಶ್ರೀಮಾತೆಯವರ ಬಳಿಗೆ ಹೋಗು. ಕಾಳೀಘಾಟ್‌ನಲ್ಲಿ ಯಾರಿದ್ದಾರೋ, ಅವರೇ ಬಾಗ್ ಬಜಾರಿನಲ್ಲಿ('ಉದ್ಬೋಧನ'ದಲ್ಲಿ) ಇದ್ದಾರೆ — ಇಬ್ಬರೂ ಒಂದೇ ಎಂದು ತಿಳಿ.''

ಕಾಳೀಘಾಟ್ ಮಂದಿರದಲ್ಲಿ ಪ್ರಣಾಮ ಮಾಡಿದ ಬಳಿಕ 'ಉದ್ಬೋಧನ'ಕ್ಕೆ ಬಂದು ತಲುಪಿದೆ. ಅಲ್ಲಿ ಬಂದು ನೋಡಿದಾಗ, ಶ್ರೀಮಾತೆಯವರ ದರ್ಶನ ಮಾಡಲು ಬಂದವರ ಸಾಲಿನಲ್ಲಿ ನಾನು ಕೊನೆಯ ವ್ಯಕ್ತಿ. ನಾನು ದೂರದಿಂದಲೇ ನೋಡಿದೆ — ಶ್ರೀಮಾತೆಯವರು ಮುಖದ ಮೇಲೆ ಸೆರಗನ್ನು ಹೊದ್ದುಕೊಂಡು ಕುಳಿತಿದ್ದಾರೆ; ಪ್ರಣಾಮ ಮಾಡಿದ ವ್ಯಕ್ತಿಗಳಿಗೆ ಮಾತ್ರವೇ ಆಶೀರ್ವಾದ ಮಾಡುತ್ತಿದ್ದಾರೆ. ಕೊನೆಗೆ ನನ್ನ ಸರದಿ ಬಂತು. ಆಗ ಉಳಿದ ವ್ಯಕ್ತಿಗಳೆಲ್ಲರೂ ಹೊರಟು ಹೋಗಿದ್ದರು. ನಾನು ಶ್ರೀಮಾತೆಯವರ ಪಾದಗಳ ಮೇಲೆ ತಲೆಯನ್ನಿಟ್ಟು ಸಾಷ್ಟಾಂಗ ನಮಸ್ಕಾರ ಮಾಡಿ ಮೇಲೇಳುತ್ತಲೇ ನೋಡಿದೆ — ಆಗ ಶ್ರೀಮಾತೆಯವರು ಮುಖಕ್ಕೆ ಮುಚ್ಚಿಕೊಂಡಿದ್ದ ಸೆರಗನ್ನು ಸರಿಸಿದ್ದರು. ಚೆನ್ನಾಗಿ ನಗುತ್ತ ನನಗೆ ಹೇಳಿದರು, ''ಈ ಸಿಹಿತಿಂಡಿಯನ್ನು ತೆಗೆದುಕೋ ಮಗೂ, ತಿನ್ನು.'' ಶ್ರೀಮಾತೆಯವರು ತಮ್ಮ ಕೈಯಿಂದಲೇ ನನಗೆ ಸಿಹಿತಿಂಡಿ ಕೊಟ್ಟರು. ನಾನು ಅವರಿಗೆ ಬೇಲೂರು ಮಠದ ವರ್ತಮಾನವನ್ನೆಲ್ಲ ತಿಳಿಸಿದೆ. ಕೊನೆಗೆ ನಾನು ಪ್ರಾರ್ಥಿಸಿಕೊಳ್ಳಬೇಕೆಂದಿದ್ದ ವಿಷಯವನ್ನು ಕೇಳಿದೆ. ಎಲ್ಲವನ್ನೂ ಕೇಳಿದ ನಂತರ ಶ್ರೀಮಾತೆ ಹೇಳಿದರು: ''ಹೊರಗಡೆ ಹೋಗಿ ಕಠೋರ ತಪಸ್ಸನ್ನು ಆಚರಿಸುವುದು ಠಾಕೂರರಿಗೆ ಅಷ್ಟು ಹಿಡಿಸುತ್ತಿರಲಿಲ್ಲ ಮಗೂ. ಅದಲ್ಲದೆ, ಬೇಲೂರು ಮಠವನ್ನು ಬಿಟ್ಟು, ರಾಖಾಲನನ್ನು ಬಿಟ್ಟು ನೀನು ತಪಸ್ಸು ಮಾಡಲು ಎಲ್ಲಿಗೆ ಹೋಗುವೆ? ನೀನು ರಾಖಾಲನ ಸೇವೆ ಮಾಡುತ್ತಿದ್ದೀಯೆ ಅದರಿಂದಲೇ ಎಲ್ಲವೂ ಆಗುವುದಿಲ್ಲವೆ?'' ಆದರೆ ನಾನು ಮಕ್ಕಳ ಹಾಗೆ ಅವರ ಬಳಿ ಅನುಮತಿ ಹಾಗೂ ಆಶೀರ್ವಾದಕ್ಕಾಗಿ ಪೀಡಿಸತೊಡಗಿದೆ. ನನ್ನ ಮಾತಿಗೆ ಮರುಳಾಗದೆ, ಶ್ರೀಮಾತೆ ಕೊನೆಗೆ ಹೀಗೆಂದರು: ''ಸರಿ, ನೀನು ತಪಸ್ಸಿಗೆ ಬೇಕಾದರೆ ಹೋಗು — ಕಾಶಿಗೆ ಬೇಕಾದರೆ ಹೋಗಬಹುದು. ಆದರೂ ನೀನು ನನಗೆ ಒಂದು ಮಾತು ಕೊಡಬೇಕು. ಇಚ್ಛಾಪೂರ್ವಕವಾಗಿ ಅನವಶ್ಯಕ ಕಠೋರತೆಯನ್ನು ಅಭ್ಯಾಸ ಮಾಡಬೇಡ. ಮಾರ್ಗದಲ್ಲಿ ನೀನು ಕೇಳದೆಯೇ ಏನಾದರೂ ಸಹಾಯ ದೊರಕಿದರೆ ಮಾತ್ರ ಸ್ವೀಕರಿಸು. ಕಾಶಿಯಲ್ಲಿ ತಪಸ್ಸು ಮಾಡಲು ಬೇಕಾದ ಸಮಯವನ್ನಾದರೂ ಸರಿ, ಯಾರಾದರೂ ಕೊಟ್ಟರೆ ಮಾತ್ರ ನೀನು ತೆಗೆದುಕೊಳ್ಳಬೇಕು. ಸೇವಾಶ್ರಮದಲ್ಲಿ ನೀನು ತಂಗಿರು. ತುಂಬ ಇಚ್ಛೆಯುಂಟಾದರೆ ಮಾತ್ರ ಹೊರಗೆ ಭಿಕ್ಷೆ ಬೇಡಿ ತಿನ್ನು. ಅಲ್ಲಿ ಕಾಶೀಧಾಮದ ವಾಸ ಮಾಡಿದ ಹಾಗೂ ಆಗುವುದು, ತಪಸ್ಸೂ ಆಗುವುದು.'' ನಾನು ಶ್ರೀಮಾತೆಯವರಿಗೆ ಮಾತು ಕೊಟ್ಟೆ. ಹೀಗೆ ನಾನು ಬರಿಗಾಲಿನಲ್ಲಿ ಕಾಶಿಗೆ ಹೋಗಲು ಅನುಮತಿ ಪಡೆದೆ. ಶ್ರೀಮಾತೆಯವರೇನೋ ಅನುಮತಿ ನೀಡಿದರು. ಆದರೆ ನಡಿಗೆ ಮೂಲಕ ಕಾಶಿಗೆ ಹೋಗುವ ವಿಷಯದಲ್ಲಿ ಸಂಪೂರ್ಣ ಸಮ್ಮತಿ ಅವರಿಗಿರಲಿಲ್ಲ ಎಂಬುದೂ ನನಗೆ ಅರ್ಥವಾಯಿತು. ಬಳಿಕ ಅವರಿಗೆ ಪ್ರಣಾಮ ಮಾಡಿ, ಅವರ ಆಶೀರ್ವಾದದೊಂದಿಗೆ ಆನಂದದಿಂದ ಬೇಲೂರು

ಮಠಕ್ಕೆ ಮರಳಿದೆ. ರಾಜಾ ಮಹಾರಾಜ್, ಮಹಾಪುರುಷ ಮಹಾರಾಜ್, ಬಾಬುರಾಮ ಮಹಾರಾಜ್ ಎಲ್ಲರಿಗೂ ವಿಷಯ ವನ್ನೆಲ್ಲ ತಿಳಿಸಿದೆ.

ಐದಾರು ತಿಂಗಳ ನಂತರ, ಒಂದು ಸಣ್ಣ ಚೀಲವನ್ನು ತೆಗೆದು ಕೊಂಡು, ಬೆಳಿಗ್ಗೆ ಇನ್ನೂ ಕತ್ತಲಾಗಿದ್ದಲೇ ಗಂಗಾಸ್ನಾನ ಮಾಡಿ, ಕಾಶಿಗೆ ಹೋಗುವ ಉದ್ದೇಶದಿಂದ ಬೇಲೂರು ಮಠದಿಂದ ಹೊರಟೆ. ಒಂದು ಕೈಯಲ್ಲಿ ಒಂದು ದಂಡ, ಇನ್ನೊಂದು ಕೈ ಯಲ್ಲಿ ಕಮಂಡಲು ಇತ್ತು. ಆಗ ನಾನು ಬ್ರಹ್ಮಚಾರಿಯಾಗಿದ್ದೆ; ಆದ್ದರಿಂದ ಬಿಳಿಯ ವಸ್ತ್ರ ಧರಿಸಿದ್ದೆ. ಒಂದು ಧೋತಿಯನ್ನು ಹರಿದು, ಅರ್ಧವನ್ನು ಸುತ್ತಿಕೊಂಡೆ, ಇನ್ನೊಂದರ್ಧವನ್ನು ಮೈ ಮೇಲೆ ಹೊದ್ದುಕೊಂಡೆ. ಗ್ರಾಂಡ್ ಟ್ರಂಕ್ ರಸ್ತೆಯಲ್ಲಿ ಒಬ್ಬಂಟಿ ಯಾಗಿ ನಡೆಯಲು ಆರಂಭಿಸಿದೆ. ಅದು ಭಾದ್ರಪದ ತಿಂಗಳು; ನಡೆಯುತ್ತ ಹೋದಂತೆ ನನ್ನ ಅರಿವಿಗೆ ಬಂತು, ಬರಿಗಾಲಿನಲ್ಲಿ ನಡೆಯುವುದು ಶ್ರೀಮಾತೆಯವರಿಗೆ ಸಮ್ಮತವಾಗಿರಲಿಲ್ಲ ಎಂದು. ದಾರಿಯಲ್ಲಿ ನಾನು ಅತ್ಯಂತ ದುರ್ಬಲನಾದೆ; ಅಸ್ವಸ್ಥನಾದೆ. ಎರಡು ದಿನಗಳಿಂದ ಹೊಟ್ಟೆಗೆ ಹೆಚ್ಚೇನೂ ಹಾಕಿರಲಿಲ್ಲ. ನಡು ನಡುವೆ ಶ್ರೀಮಾತೆಯವರ ಮೇಲೆ ಕೋಪ ಬರುತ್ತಿತ್ತು. ಮೂರನೇ ದಿನ ಬೆಳಗಿನ ಹೊತ್ತು ದಾರಿಯ ನಡುವೆ, ಒಂದು ದೊಡ್ಡ ಮಾವಿನ ಮರದ ಕೆಳಗೆ ಆಯಾಸಗೊಂಡು ಮಲಗಿದ್ದೆ. ಮನಸ್ಸಿನಲ್ಲೇ ಹೇಳಿಕೊಳ್ಳುತ್ತಿದ್ದೆ– 'ಅಮ್ಮಾ, ನೀವು ಆಶೀರ್ವಾದ ಮಾಡಿದಿರಿ. ಅದರ ಫಲ ಹೀಗೇನು?' ಅಂತ. ಸ್ವಲ್ಪ ಹೊತ್ತಿನ ನಂತರ ಆ ಮರದ ಕೆಳಗೆ ಒಂದು ಮೋಟರ್‌ಗಾಡಿ ಬಂದು ನಿಂತಿತು. ಗಾಡಿಯಿಂದ ಒಂದು ಕುಟುಂಬ ಕೆಳಗಿಳಿಯಿತು. ಅವರೆಲ್ಲ ಮರದ ಕೆಳಗೆ ಕುಳಿತು ಊಟ ಮಾಡತೊಡಗಿದರು. ನಾನು ಮಲಗಿಕೊಂಡೇ ಇದ್ದೆ. ಅವರು ಯಾರು, ಏನು ಎಂದೆಲ್ಲ ನೋಡುವ ಇಚ್ಛೆಯಾಗಲಿ, ಮನಸ್ಸಾಗಲಿ ನನಗಿರಲಿಲ್ಲ. ಇದ್ದ ಕ್ಕಿದ್ದಂತೆ ಒಂದು ಪರಿಚಿತವಾದ ಗಂಡಸಿನ ಧ್ವನಿ ಕೇಳಿಸಿತು: ''ಸೂರ್ಯ ಮಹಾರಾಜ್ ಅಲ್ಲವೆ? ಇಲ್ಲೇನು ಮಾಡುತ್ತಿದ್ದೀರಿ?'' ನಾನು ಅವನತ್ತ ನೋಡಿದೆ, ಆತ ಪರಿಚಯವಿದ್ದ ಬೇಲೂರು ಮಠದ ಒಬ್ಬ ಭಕ್ತ. ನಾನು ಕಾಶಿಗೆ ಹೊರಟಿದ್ದನ್ನು ಕೇಳಿ ಆತ ಹೇಳಿದ: ''ನೀವು ನಮ್ಮ ಗಾಡಿಯಲ್ಲೇ ಬನ್ನಿ. ನಾವು ಮಧು ಪುರಕ್ಕೆ ಹೋಗುತ್ತಿದ್ದೇವೆ. ಎಷ್ಟು ಸಾಧ್ಯವೋ ಅಷ್ಟು ದೂರದ ವರೆಗೆ ಬಿಡುತ್ತೇವೆ.'' ನಾನಂದೆ, ''ಧನ್ಯವಾದ. ಆದರೆ ನಾನು ಕಾಲುನಡಿಗೆಯಲ್ಲೇ ಹೋಗಬೇಕೆಂದು ತೀರ್ಮಾನಿಸಿದ್ದೇನೆ.'' ಆಗ ಆ ವ್ಯಕ್ತಿ ತಾನು ತಂದಿದ್ದ ಆಹಾರ ಪದಾರ್ಥಗಳಿಂದ ನನಗೋಸ್ಕರ ಪರೋಟಾ, ಹಣ್ಣುಗಳು, ಸಿಹಿತಿಂಡಿ ಇತ್ಯಾದಿ ಗಳನ್ನು ತೆಗೆದುಕೊಟ್ಟು, ನನಗೆ ಮೊದಲು ತಿನ್ನಿಸಿದರು. ಕಮಂ ಡಲದಲ್ಲಿ ನೀರು ತುಂಬಿಸಿಕೊಟ್ಟರು. ನಾನು ಊಟ ಮಾಡಿದೆ. ಆದರೆ ಅವರು ಎಷ್ಟೇ ಒತ್ತಾಯಿಸಿದರೂ ನಾನು ಅವರ ಗಾಡಿ ಯನ್ನು ಏರಲಿಲ್ಲ, ಹಾಗೂ ಅವರಿಂದ ಹಣ ತೆಗೆದುಕೊಳ್ಳಲಿಲ್ಲ. ಊಟ ಇತ್ಯಾದಿಗಳನ್ನು ಮುಗಿಸಿಕೊಂಡು, ಸ್ವಲ್ಪ ಹೊತ್ತಿನ ನಂತರ ಅವರು ಹೊರಟುಹೋದರು. ಮತ್ತೆ ನನ್ನ ಯಾತ್ರೆ ಆರಂಭ ವಾಯಿತು. ನಾನು ಒಂದೇ ಸಮನೆ ನಡೆಯುತ್ತಿದ್ದೆ. ಬರಿಗಾಲಲ್ಲಿ ನಡೆದದ್ದರಿಂದ ನನ್ನ ಕಾಲುಗಳಲ್ಲಿ ಗುಳ್ಳೆಗಳೆದ್ದವು; ಮೈ ಕೈ ನೋವು ಉಂಟಾಗಿತ್ತು. ಹಗಲು ಹೊತ್ತು ನಡೆಯುವುದು ಕಷ್ಟ ವೆನಿಸಿ ರಾತ್ರಿಹೊತ್ತು ನಡೆಯುತ್ತಿದ್ದೆ. ಹೀಗೆಯೇ ಇನ್ನೂ ಮೂರು ದಿನ ಕಳೆದವು. ಈ ಮೂರು ದಿನಗಳಲ್ಲಿ ಹೆಚ್ಚಾಗಿ ಒಂದಿಷ್ಟು ಮರಸೇಬು ಬಿಟ್ಟರೆ ಇನ್ನೇನನ್ನೂ ತಿನ್ನಲಿಲ್ಲ. ನೆನಪಾಯಿತು, ಆ ಭಕ್ತನು ತಮ್ಮೊಂದಿಗೆ ನನ್ನನ್ನು ಕರೆದುಕೊಂಡು ಹೋಗಿ, ಎಲ್ಲಿಯ ತನಕ ಸಾಧ್ಯವೋ ಅಲ್ಲಿಯ ತನಕ ಬಿಡಲು ಬಯಸಿದ್ದರು ಎಂಬುದಾಗಿ. ಆದರೆ ನಾನು ಅವರ ಮಾತನ್ನು ಕೇಳಲಿಲ್ಲ. ಶ್ರೀಮಾತೆ ನನಗೆ ಹೇಳಿದ್ದರು, ''ನೀನು ಇಚ್ಛೆಪಟ್ಟು ಅನರ್ಥ ವುಂಟಾಗುವ ಹಾಗೆ ಕಠೋರತೆಯನ್ನು ಮೈಮೇಲೆ ಹೊತ್ತು ಕೊಳ್ಳಬೇಡ'' ಎಂದು. ಭಕ್ತರ ಮಾತನ್ನು ಕೇಳದ್ದರಿಂದ ಶ್ರೀಮಾತೆ ಯವರ ಮಾತನ್ನು ಮೀರಿದ ಹಾಗಾಯಿತು; ಆದ್ದರಿಂದ ನನಗೆ ಇಷ್ಟೊಂದು ಕಷ್ಟವಾಗಿದೆ. ಭಿಕ್ಷೆ ಬೇಡಲು ಹೋದರೆ ಜನರು ಹಾಸ್ಯ ಮಾಡತೊಡಗಿದರು. ಬಿಳಿ ಬಟ್ಟೆ ಧರಿಸಿದ್ದು ಭಿಕ್ಷೆ ಸಿಗ ದಿರಲು ಇನ್ನೊಂದು ಕಾರಣವಾಗಿತ್ತು. ಏನೇ ಇರಲಿ, ಪ್ರತಿದಿನ ನಾನು ಸುಮಾರು ಇಪ್ಪತ್ತೊಂದು ಮೈಲಿಯಂತೆ ನಡೆಯುತ್ತಿದ್ದೆ. ಹೀಗೇ ಯಾತ್ರೆ ಮಾಡುತ್ತ ನಾನು ಏಳನೇ ದಿನ ಸಾಯಂಕಾಲ ಪಶ್ಚಿಮ ಬಂಗಾಳ–ಬಿಹಾರ ರಾಜ್ಯಗಳ ಗಡಿಪ್ರದೇಶದಲ್ಲಿದ್ದ ಒಂದು ಹಳ್ಳಿಯನ್ನು ತಲುಪಿದೆ. ಹಜಾರಿಬಾಗ್ ಜಿಲ್ಲೆಯ ಒಂದು ಹಳ್ಳಿ ಅದಾಗಿತ್ತು.

ಆ ಗ್ರಾಮದ ಹೆಸರು ವೀರಪುರ. ತುಂಬಾ ಹುಡುಕಾಡಿದ ಮೇಲೆ ಒಂದು ಶಿವಮಂದಿರ ಕಾಣಿಸಿತು. ಅಲ್ಲೇ ರಾತ್ರಿ ಹೊತ್ತು ಆಶ್ರಯ ಪಡೆದೆ. ಅಲ್ಲಿ ಸಿಕ್ಕಾಪಟ್ಟೆ ಸೊಳ್ಳೆಗಳಿದ್ದವು. ಅಲ್ಲಿ ರಾತ್ರಿ ಹೊತ್ತು ಕಳೆಯುವುದು ಕಷ್ಟವೆನಿಸಿತು. ಕುಳಿತುಕೊಂಡೇ ಸೊಳ್ಳೆ ಗಳನ್ನು ಓಡಿಸುತ್ತಿದ್ದೆ. ಮತ್ತೆ ನಾನು ಶ್ರೀಮಾತೆಯವರ ಆಶೀ ರ್ವಾದದ ಲೀಲೆಯನ್ನು ಕಂಡೆ. ರಾತ್ರಿ ಸುಮಾರು ಒಂಬತ್ತು ಗಂಟೆಯ ಹೊತ್ತಿಗೆ ಮಂದಿರದ ಪೂಜಾರಿ ಅಲ್ಲಿಗೆ ಬಂದ. ನನ್ನನ್ನು ಸೂಕ್ಷ್ಮವಾಗಿ ಗಮನಿಸಿದ. ಇನ್ನೂ ಯುವಕನಾಗಿದ್ದ ನನಗೆ ಕೆಲವು ಪ್ರಶ್ನೆಗಳನ್ನು ಕೇಳಿದ. ಬಳಿಕ ಪೂಜೆ ಮಾಡಲು ಕುಳಿತ. ಪೂಜೆ ಮುಗಿದ ನಂತರ ನನಗೆ ಹೇಳಿದ: ''ಮೇರೇ ಸಾಥ್ ಘರ್ ಮೇ ಚಲಿಯೇ, ಯಹಾ ರಾತ್ ಮೇ ಭಾಲೂ ಔರ್ ಜಾನುಮಾರ್ ಭೀ ಆತಾ ಹೈ''(ನನ್ನೊಂದಿಗೆ ನನ್ನ ಮನೆಗೆ ಬನ್ನಿ. ಇಲ್ಲಿ ರಾತ್ರಿ ಹೊತ್ತು ಕರಡಿ ಬರುತ್ತದೆ, ಬೇರೆ ಪ್ರಾಣಿಗಳೂ ಬರುತ್ತವೆ.) ನಾನು ''ಇಲ್ಲ'' ಎನ್ನಲು ಹೊರಟಿದ್ದೆ. ಆದರೆ ಶ್ರೀಮಾತೆಯವರ ಮಾತುಗಳು ನೆನಪಾದವು, ''ನೀನು ಇಚ್ಛಾ ಪೂರ್ವಕವಾಗಿ ಕಠೋರತೆಯನ್ನು ಆಚರಿಸಬಾರದು'' ಎಂಬು ದಾಗಿ. ಕೆಲಸಕ್ಕೆ ಅಗತ್ಯವಿದ್ದಷ್ಟು ಮಾತ್ರ ಮಾತನಾಡುತ್ತ ಅವ

ನೊಂದಿಗೆ ಸ್ವಲ್ಪ ಹೊತ್ತು ಕಳೆದೆ. ಅವನೊಂದಿಗೆ ಅವನ ಮನೆಗೆ ಹೋದೆ. ಒಳ್ಳೆಯ ಅನುಕೂಲಸ್ಥ ಕುಟುಂಬ. ಪೂಜಾರಿಯ ವಿಧವೆ ತಾಯಿ ನನಗೆ ತುಂಬ ಹಿಡಿಸಿದರು. ಜಪ, ಆಹ್ನಿಕಗಳನ್ನು ಮಾಡಲು ಅವರು ನನ್ನನ್ನು ದೇವರ ಕೋಣೆಗೆ ಕರೆದುಕೊಂಡು ಹೋದರು. ದೇವರಕೋಣೆಗೆ ಹೋಗಿ ನೋಡಿದ ನಾನು ಆಶ್ಚರ್ಯಚಕಿತನಾದೆ! ದೇವದೇವತೆಗಳ ನಡುವೆ ಶ್ರೀರಾಮ ಕೃಷ್ಣರ ಭಾವಚಿತ್ರವೂ ಇತ್ತು! ನನ್ನ ಅಚ್ಚರಿಗೆ ಪಾರವೇ ಇಲ್ಲ. ನನಗರಿವಿಲ್ಲದೆಯೇ ನನ್ನ ಕಣ್ಣುಗಳಲ್ಲಿ ನೀರಿಳಿಯತೊಡಗಿತು. ಬಂಗಾಳ-ಬಿಹಾರದ ಗಡಿ ಪ್ರದೇಶದಲ್ಲಿರುವ ಈ ಕುಗ್ರಾಮ ದಲ್ಲಿ ಶ್ರೀರಾಮಕೃಷ್ಣರು ಹೇಗೆ ಬಂದುಬಿಟ್ಟರು? ನನ್ನ ಮನಸ್ಸಿ ನಲ್ಲಿ ಅದೆಂಥ ಆನಂದ ಹಾಗೂ ವಿಶ್ವಾಸವುಂಟಾಯಿತು ಎಂಬು ದನ್ನು ಹೇಗೆ ಹೇಳಲಿ? ಆ ವೃದ್ಧೆಯ ಪ್ರೀತಿ, ಆದರಗಳಿಂದ ಹಾಗೂ ಒತ್ತಾಯದ ಮೇರೆಗೆ ನಾನು ಅಲ್ಲೇ ಮೂರು ದಿನ ಗಳನ್ನು ಕಳೆದೆ. ಖಿಚಡಿ, ಮಾಲ್‌ಪೋವಾ ಇತ್ಯಾದಿಗಳನ್ನು ಅವರು ತಮ್ಮ ಕೈಗಳಿಂದಲೇ ತಯಾರಿಸಿ ನನಗೆ ತಿನ್ನಿಸಿದರು. ನನ್ನ ಕಾಲುಗಳಲ್ಲಿ ಎದ್ದಿದ್ದ ಗುಳ್ಳೆಗಳಿಗೆ ಮುಲಾಮು ಹಚ್ಚಿದರು. ಕಾಲಿನ ನೋವು ವಾಸಿಯಾಗಲು ಸುಣ್ಣ-ಅರಶಿನ ಹಚ್ಚಿದರು. ಮೂರು ದಿನಗಳ ನಂತರ ನನಗೆ ವಾಸಿಯಾದಂತೆ ಅನ್ನಿಸಿತು. ಈಗ ಮತ್ತೆ ನಡಿಗೆ ಆರಂಭಿಸಲು ನಾನು ಶಕ್ತನಾಗಿದ್ದೆ. ಆದರೆ ಆ ವೃದ್ಧೆ ಹೇಳಿದಳು: ''ಇಲ್ಲ ಮಗೂ, ನೀನಿನ್ನೂ ದುರ್ಬಲ. ಇಷ್ಟೊಂದು ದಾರಿ ನಡೆಯುತ್ತಾ ಹೋಗಿ, ನೀನು ಕಾಶಿಯನ್ನು ತಲುಪಿದ ನಂತರ ಅಲ್ಲಿ ತಪಸ್ಸು ಮಾಡಲಾರೆ. ಇಗೋ ನಿನಗೆ ಹೋಗಲು ಟ್ರೈನಿನ ಟಿಕೆಟ್. ನೀನು ಟ್ರೈನ್‌ನಲ್ಲೇ ಹೋಗು.'' ಶ್ರೀಮಾತೆಯವರ ಮಾತು ನೆನಪಾಯಿತು. ಈ ಸಲವಂತೂ ನನಗೆ 'ಇಲ್ಲ' ಎನ್ನಲಾಗಲಿಲ್ಲ. ಅವರು ಸಮೀಪದ ರೈಲ್ವೇ ಸ್ಟೇಶ ನ್ನಿಗೆ ನನ್ನೊಂದಿಗೆ ಬಂದು, ನನ್ನನ್ನು ಟ್ರೈನಿಗೆ ಹತ್ತಿಸಿ ಕಳುಹಿಸಿ ಕೊಟ್ಟರು.

ಆ ವೃದ್ಧೆ ಹಾಗೂ ಅವರ ಮಕ್ಕಳಿಂದ ಅವರ ಮನೆಯ ದೇವರಕೋಣೆಯಲ್ಲಿದ್ದ ಶ್ರೀರಾಮಕೃಷ್ಣರ ಭಾವಚಿತ್ರದ ಹಿಂದಿನ ಕಥೆಯನ್ನು ಕೇಳಿದ್ದೆ. ಅವರ ಮಗ ಒಂದು ಸಲ ಸುತ್ತಾಡಲು ಕಾಶಿಗೆ ಹೋಗಿದ್ದ. ಅಲ್ಲಿ ಒಂದು ಹೋಮಿಯೋಪಥಿ ಔಷಧಿಯ ಅಂಗಡಿಯಲ್ಲಿದ್ದ ಕ್ಯಾಲೆಂಡರ್‌ನಲ್ಲಿ ಶ್ರೀರಾಮಕೃಷ್ಣರ ಚಿತ್ರವನ್ನು ನೋಡಿ, ಅದನ್ನು ತೆಗೆದುಕೊಂಡು ಬಂದ. ಬಹುಶಃ ಅದು ಎಂ.(ಮಹೇಶ) ಭಟ್ಟಾಚಾರ್ಯನ ಅಂಗಡಿಯಿಂದ ಇರಬೇಕು. ಅಂಗಡಿಯಲ್ಲಿ ಕೇಳಿದಾಗ ಆ ಚಿತ್ರ ಶ್ರೀರಾಮಕೃಷ್ಣರದು ಎಂದು ಹೇಳಿದ್ದರು: ''ರಾಮಕಿಶನ್(ರಾಮಕೃಷ್ಣ) — ಕೋಯೀ ಬಾಂಗಾಳೀ ಅವತಾರ್ ಹೋಂಗೇ.'' (ರಾಮಕೃಷ್ಣ ಅಂತ-ಯಾರೋ ಬಂಗಾಳಿ ಅವತಾರಪುರುಷನಿರಬೇಕು) ತಾಯಿ ಮತ್ತು ಇಬ್ಬರು ಮಕ್ಕಳು ಹೇಳಿದರು, ''ಲೇಕಿನ್ ಏ ಫೋಟೋ ಘರ್‌ಮೇ ಲೇ ಆನೇ ಕೇ ಬಾದ್ ಸಬ್ ಕುಛ್ ಅಚ್ಛಾ ಚಲ್ ರಹಾ ಹೈ.'' (ಆದರೆ, ಈ ಫೋಟೋವನ್ನು ಮನೆಗೆ ತಂದ ನಂತರ ಸಂಸಾರದಲ್ಲಿ ಎಲ್ಲವೂ ಚೆನ್ನಾಗಿ ನಡೆಯುತ್ತಿದೆ.) ಆ ಫೋಟೋ ವನ್ನು ಅಂಗಡಿಯಿಂದ ಏಕೆ ತೆಗೆದುಕೊಂಡು ಬಂದರು ಎಂಬು ದಾಗಿ ಕೇಳಿದಾಗ ಅವರ ಮಗ ಹೇಳಿದ, ''ರಾಮಕೃಷ್ಣರ ಎರಡೂ ಕಣ್ಣುಗಳಲ್ಲಿ ಅದೇನೋ ಮಾಂತ್ರಿಕತೆಯಿದೆ. ಆ ಕಣ್ಣುಗಳು ನನ್ನನ್ನು ತುಂಬಾ ಆಕರ್ಷಿಸಿದವು. ಆದ್ದರಿಂದಲೇ ಕ್ಯಾಲೆಂಡರನ್ನು ತೆಗೆದುಕೊಂಡು ಬಂದೆ. ಅನಂತರ ಫ್ರೇಮ್ ಹಾಕಿಸಿ ತಂದೆ.''

ಇರಲಿ, ಟ್ರೈನ್‌ನಲ್ಲಿ ಕಾಶಿ ತಲುಪಿದೆ. ಆ ವೃದ್ಧೆ ಮತ್ತು ಅವರ ಮಗ ನನ್ನನ್ನು ತಮ್ಮ ಮನೆಯಲ್ಲಿ ಇನ್ನಷ್ಟು ದಿನ ಇರಿಸಿಕೊಳ್ಳ ಬೇಕೆಂದಿದ್ದರು. ಕೊನೆಗೆ ಹೇಗೋ ತುಂಬಾ ಹೇಳಿ ಅವರ ನ್ನೊಪ್ಪಿಸಿ, ನಾಲ್ಕನೇ ದಿನ ಅವರಿಗೆ ಮನಸ್ಸಿಲ್ಲದಿದ್ದರೂ ಅವರಿಂದ ಬೀಳ್ಕೊಂಡೆ. ಕಾಶಿ ತಲುಪುವವರೆಗೂ ನನಗೆ ಬೇರೆ ಯಾವ ತೊಂದರೆಯೂ ಉಂಟಾಗಲಿಲ್ಲ. ಬೇಲೂರು ಮಠದಿಂದ ಹೊರಟ ನಂತರ ಶ್ರೀಮಾತೆಯವರು ಯಾವಾಗಲೂ ನನ್ನೊಂದಿಗೇ ಇದ್ದಾರೆ ಎಂದು ನಾನು ಭಾವಿಸತೊಡಗಿದೆ.

ಶ್ರೀಮಾತೆ ಹೇಳಿದ್ದರು: ''ಸೇವಾಶ್ರಮದಲ್ಲಿ ತಂಗು; ತುಂಬಾ ಇಚ್ಛೆಯುಂಟಾದರೆ ಹೊರಗೆ ಭಿಕ್ಷೆ ಬೇಡಿ ತಿನ್ನಬಹುದು.'' ಆದರೆ ತಪಸ್ಸು ಮಾಡುವ ತೀವ್ರ ಪ್ರೇರಣೆ ನನ್ನಲ್ಲಿ ಇದ್ದುದರಿಂದ ನಾನು ಎಷ್ಟು ದಿನ ತಪಸ್ಸು ಮಾಡುತ್ತೇನೋ ಅಷ್ಟು ದಿನ ಹೊರಗೆಯೇ ತಂಗುತ್ತೇನೆ - ಎಂದು. ಸೇವಾಶ್ರಮದಲ್ಲಿ ತಂಗಿದರೆ, ವಾಸ ಸ್ಥಾನದ ಬಗ್ಗೆ ನಿಶ್ಚಿಂತೆಯುಂಟಾಗಿ, ತಪಸ್ಸಿಗೆ ಭಂಗವುಂಟಾಗು ತ್ತದೆ. ನಾನು ಖಂಡಿತ ಹೊರಗೆಯೇ ತಂಗುತ್ತೇನೆ; ಭಿಕ್ಷೆ ಬೇಡಿ ಯೇ ತಿನ್ನುತ್ತೇನೆ; ಹೀಗೆ ನಿರ್ಧರಿಸಿದೆ. ಗಂಗಾನದಿಗೆ ಸಮೀಪ ದಲ್ಲಿದ್ದ ಒಂದು ಹಳೆಯ ಉದ್ಯಾನಮನೆಯಲ್ಲಿ ಒಂದು ಸ್ಥಳ ಸಿಕ್ಕಿತು. ಕೇವಲ ಭಿಕ್ಷೆಯನ್ನಷ್ಟೇ ಅವಲಂಬಿಸಿ ಧ್ಯಾನ, ಜಪ, ತಪಸ್ಸು ಮಾಡುತ್ತ ದಿನ ಕಳೆಯತೊಡಗಿದೆ. ನಾನು ವಾಸವಾಗಿದ್ದ ಜಾಗ ಅಷ್ಟೇನೂ ಆರೋಗ್ಯಕರವಾಗಿರಲಿಲ್ಲ. ಹಲವು ಬಗೆಯ ಕೀಟ, ಹುಳ ಹಾಗೂ ಸೊಳ್ಳೆ ಇತ್ಯಾದಿಗಳ ಉಪದ್ರವ ಬಹಳ ವಾಗಿತ್ತು. ಶ್ರೀಮಾತೆಯವರು ನನಗೆ ಸೇವಾಶ್ರಮದಲ್ಲೇ ವಾಸ ವಾಗಿರಲು ಮತ್ತು ''ತುಂಬಾ ಇಚ್ಛೆಯುಂಟಾದರೆ ಮಾತ್ರ'' ಭಿಕ್ಷಾಟನೆ ಮಾಡಬಹುದು ಎಂಬುದಾಗಿ ಏಕೆ ಹೇಳಿದ್ದರು ಎಂದು ಈಗ ಅರ್ಥವಾಯಿತು. ಉತ್ತರ ಭಾರತದಲ್ಲಿ ಭಿಕ್ಷೆ ನೀಡುವ ದಾಲ್-ಚಪಾತಿ ಇವು ನನಗೆ ಹಿಡಿಸಲಿಲ್ಲ. ಬೇಗನೆ ನಾನು ತುಂಬ ಕ್ಷೀಣಿಸಿದಂತೆ ಅನ್ನಿಸಿತು. ನನ್ನ ಮನಸ್ಸಿನಲ್ಲಿ ಮೊದಲಿಗೆ ಇದ್ದ ಉತ್ಸಾಹ ಈಗ ಕಡಿಮೆಯಾದಂತೆ ಅನ್ನಿಸಿತು. ಮನಸ್ಸಿಗೆ ಪ್ರೇರಣೆ ಯನ್ನು ತಂದುಕೊಳ್ಳುವ ಸಲುವಾಗಿ ಪೂಜ್ಯ ಲಾಟು ಮಹಾ ರಾಜರ (ಸ್ವಾಮಿ ಅದ್ಭುತಾನಂದ) ಬಳಿಗೆ ಹೋದೆ. ಆಗ ಅವರು ಕಾಶಿಯಲ್ಲಿ ಗಂಗಾನದಿಯ ಸಮೀಪದಲ್ಲಿದ್ದ ಒಂದು ಘಾಟ್‌ನಲ್ಲಿ ವಾಸ ಮಾಡುತ್ತಿದ್ದರು. ಅವರು ನನ್ನನ್ನು ನೋಡಿ ಪರಮ ಸ್ನೇಹ ದಿಂದ ಹೇಳಿದರು, ''ಸೂರ್ಯ, ನಿನಗೇನಾಗಿದೆ? ಇಷ್ಟೊಂದು

ಕ್ಷೀಣಿಸಿದ್ದೀಯಾ? ನನಗನ್ನಿಸುತ್ತಿದೆ, ಭಿಕ್ಷೆ ನಿನಗೆ ಸರಿ ಹೋಗುತ್ತಿಲ್ಲ ಅಂತ. ಸರಿ, ಈ ಎರಡು ರೂಪಾಯಿಯನ್ನು ನೀನು ಇಟ್ಟುಕೋ. ಪ್ರತಿ ತಿಂಗಳೂ ಮಾಸ್ಟರ್ ಮಹಾಶಯರು ನನಗೆ ಹಾಲಿಗೋಸ್ಕರ ಈ ಹಣ ಕಳುಹಿಸಿಕೊಡುತ್ತಾರೆ – ಈ ಎರಡು ರೂಪಾಯಿ ತೆಗೆದುಕೋ. ಇದರಿಂದ ನೀನು ಪ್ರತಿದಿನವೂ ಒಂದಿಷ್ಟು ಹಾಲು ಕುಡಿ.'' ಆದರೆ ಸ್ವತಃ ಅವರೇ ಅತ್ಯಂತ ಕಠಿಣ ರೀತಿಯ ಜೀವನ ನಡೆಸುತ್ತಿದ್ದರು. ಅವರಿಂದ ಹಣ ಸ್ವೀಕರಿಸಲು ನನಗೆ ತುಂಬ ಕಷ್ಟವಾಯಿತು. ಆದರೆ ಮತ್ತೆ ಶ್ರೀಮಾತೆಯವರ ಮಾತು ನೆನಪಿಗೆ ಬಂತು — ''ಇಚ್ಛಾಪೂರ್ವಕವಾಗಿ ನೀನು ಕಠೋರತೆಯನ್ನು ಆಚರಿಸಬೇಡ'' ಎಂದು. ಅದನ್ನು ನಾನು ಸ್ವೀಕರಿಸಲೇಬೇಕಾಯಿತು. ಲಾಟು ಮಹಾರಾಜರ ಪ್ರೀತಿಯನ್ನು ಕಂಡು ನನ್ನ ಕಣ್ಣುಗಳಲ್ಲಿ ನೀರು ಬಂತು.

ನನ್ನ ದೇಹ ಸುಧಾರಿಸಲಿಲ್ಲ. ಇನ್ನಷ್ಟು ದುರ್ಬಲವಾಯಿತು. ಭೇದಿ ಕಾಣಿಸಿಕೊಂಡಿತು. ಭಿಕ್ಷೆ ಬೇಡಿ ತಿನ್ನುತ್ತಿದ್ದುದರಿಂದ ಭೇದಿ ಮತ್ತಷ್ಟು ಉಲ್ಬಣಗೊಂಡಿತು. ಒಂದು ದಿನವಂತೂ ನನ್ನ ಪರಿಸ್ಥಿತಿ ತೀರ ಕೆಟ್ಟುಹೋಯಿತು. ಅದೇ ಉದ್ಯಾನ ಮನೆಯಲ್ಲಿ ನಾನು ಒಬ್ಬಂಟಿಯಾಗಿ ಮಲಗಿಕೊಂಡಿದ್ದೆ; ಹೊಟ್ಟೆಗೆ ಏನನ್ನೂ ಹಾಕಿಕೊಳ್ಳಲಾಗಲಿಲ್ಲ ; ಪದೇ ಪದೇ ಮಲ ವಿಸರ್ಜನೆಯಾಗುತ್ತಿತ್ತು. ಇದ್ದಕ್ಕಿದ್ದಂತೆ ಯಾರೋ ಬಂದ ಹಾಗೆ ಸಪ್ಪಳವಾಯಿತು. ಉದ್ಯಾನ ಮನೆಯ ಯಜಮಾನಿ ನನ್ನ ಕೋಣೆಗೆ ನುಗ್ಗಿ ಬಂದಳು. ಮನೆಯ ಮಾಲೀಕಳು ಆಕೆ, ಕೆಲವು ವರ್ಷಗಳ ನಂತರ ಆಕೆ ಉದ್ಯಾನಮನೆಯನ್ನು ನೋಡಲು ಈ ದಿನವಷ್ಟೇ ಬಂದಿದ್ದಳು. ನನ್ನನ್ನು ಆ ಅವಸ್ಥೆಯಲ್ಲಿ ನೋಡಿದ ಕೂಡಲೇ ಅವಳಿಗೆ ಎಲ್ಲವೂ ಅರ್ಥವಾಯಿತು. ಮನೆಯನ್ನು ನೋಡಿಕೊಳ್ಳುತ್ತಿದ್ದವರಿಂದ ನನ್ನ ಬಗ್ಗೆ ಆಕೆ ತುಸು ಕೇಳಿ ತಿಳಿದುಕೊಂಡಿದ್ದಂತೆ ಕಂಡುಬಂತು. ಅದರೊಂದಿಗೆ, ನನಗೆ ಒಂದು ಒಳ್ಳೆಯ ಕೋಣೆಯನ್ನು ನೀಡುವ ವ್ಯವಸ್ಥೆ ಮಾಡಲು ಹೇಳಿದಳು. ಅದಲ್ಲದೆ, ಅಕ್ಕಿ, ತರಕಾರಿ, ಹಾಲು ಇತ್ಯಾದಿಗಳನ್ನು ನನಗೆ ಬೇಕಾದ ಹಾಗೆ ಒದಗಿಸಬೇಕು ಎಂದೂ ತಿಳಿಸಿದಳು. ಈ ಬಾರಿ ಕೂಡ ನಾನು ಬೇಡ ಎನ್ನಬೇಕೆಂದಿದ್ದೆ; ಆದರೆ ಶ್ರೀಮಾತೆಯವರ ಮಾತು ನೆನಪಾಗಿ ಎಲ್ಲದಕ್ಕೂ ಸಮ್ಮತಿಸಬೇಕಾಯಿತು. ಶ್ರೀಮಾತೆಯವರು ಸ್ವತಃ ತಾವೇ ಅವರ ಮೂಲಕ ಬಂದು ನನಗೆ ಆಹಾರ, ವಾಸ ಇತ್ಯಾದಿಗಳಿಗೆ ವ್ಯವಸ್ಥೆ ಮಾಡಿಕೊಟ್ಟು ಹೋದಂತೆ ನನಗೆ ಅನ್ನಿಸಿತು.

ಕೆಲವೇ ದಿನಗಳಲ್ಲಿ ನಾನು ವಾಸಿಯಾದೆ. ಅಷ್ಟರಲ್ಲಿ ನನಗೆ ತಿಳಿಯಿತು – ತಪಸ್ಸು ಮಾಡುವ ಬದಲು ನಾನು ಇತರರಿಂದ ಸೇವೆ ಮಾಡಿಸಿಕೊಳ್ಳುತ್ತಿದ್ದೇನೆ ಎಂಬುದಾಗಿ. ಶ್ರೀಮಾತೆಯವರ ನಿರ್ದೇಶನವನ್ನು ನೆನಪಿಸಿಕೊಂಡು, ಸೇವಾಶ್ರಮಕ್ಕೆ ಬಂದುಬಿಟ್ಟೆ. ಈ ರೀತಿ ಆರು–ಏಳು ತಿಂಗಳು ಕಳೆದವು. ನನ್ನ ಬಳಿ ಇದ್ದ ಅತ್ಯಾವಶ್ಯಕ ವಸ್ತುಗಳನ್ನೆಲ್ಲ ಕಟ್ಟಿಕೊಂಡು, ಕೆಲವೇ ದಿನಗಳಲ್ಲಿ ನಾನು ಬೇಲೂರು ಮಠಕ್ಕೆ ಮರಳಿದೆ. ರಾಜಾ ಮಹಾರಾಜರು ತಂದೆಯ ಹಾಗೆ ಅತ್ಯಂತ ವ್ಯಾಕುಲಗೊಂಡು ನನಗಾಗಿ ಕಾಯುತ್ತಿದ್ದರು. ನಾನು ಅವರ ಪಾದಗಳ ಮೇಲೆ ಬಿದ್ದೆ. ಬೇಲೂರು ಮಠವನ್ನು ಬಿಟ್ಟು ಹೋಗಿ ತಪಸ್ಸು ಮಾಡುವ ಬಯಕೆಗೆ ಇತಿಶ್ರೀಯಾಯಿತು.

ಬೇಲೂರು ಮಠಕ್ಕೆ ಮರಳಿದ ನಂತರ ನಾನು ಮತ್ತೆ ರಾಜಾ ಮಹಾರಾಜರ ಸೇವೆಗೆ ನಿಯುಕ್ತನಾದೆ. ಮಹಾಪುರುಷ ಮಹಾರಾಜ್, ಬಾಬುರಾಮ ಮಹಾರಾಜ್ ಕೂಡ ನನಗೋಸ್ಕರ ಕಾಯುತ್ತಿದ್ದರು. ಅವರ ಪ್ರೀತಿ ಅದೆಂತಹದು ಎಂದು ಮಾತಿನ ಮೂಲಕ ಹೇಳಲಾಗದು! ಆಗ ಶ್ರೀಮಾತೆಯವರು ಜಯರಾಮಬಾಟಿಯಲ್ಲಿದ್ದರು. ನಾನು ನನ್ನ ಎಲ್ಲ ವರ್ತಮಾನವನ್ನು ತಿಳಿಸಿ, ಬೇಲೂರು ಮಠದಿಂದ ಅವರಿಗೆ ಪತ್ರ ಬರೆದೆ. ತಪಸ್ಸಿನ ಬಯಕೆ ಪೂರೈಸಿತು ಹಾಗೂ ನಾನು ಬೇಲೂರು ಮಠಕ್ಕೆ ಆರೋಗ್ಯವಂತನಾಗಿ ಮರಳಿದೆ ಎಂದು ತಿಳಿದ ಶ್ರೀಮಾತೆಯವರು ಸಂತಸಗೊಂಡು, ನನಗೆ ಆಶೀರ್ವಾದದೊಂದಿಗೆ ಪತ್ರ ಬರೆದು ಕಳುಹಿಸಿದರು. ಅದರಲ್ಲಿ ಅವರು ಬರೆದಿದ್ದರು: ''ತಪಸ್ಸನ್ನಂತೂ ಚೆನ್ನಾಗಿ ಮಾಡಿ ಮರಳಿ ಬಂದೆ, ಮಗೂ. ಈಗ ನಿನ್ನ ಇಡೀ ಪ್ರಾಣವನ್ನು ಧಾರೆಯೆರೆದು ರಾಖಾಲನ ಸೇವೆಯಲ್ಲಿ ತೊಡಗಿಕೋ. ರಾಖಾಲನ ಸೇವೆ ಮಾಡುವುದರಿಂದಲೇ ನಿನಗೆ ಎಲ್ಲವೂ ದೊರಕುವುದು. ಅದಕ್ಕೆ ಹೊರತಾಗಿ ಬೇರೆ ಯಾವುದೇ ದೊಡ್ಡ ತಪಸ್ಸು ಇಲ್ಲವೆಂದೇ ತಿಳಿ.'' ಅನಂತರ ಶ್ರೀಮಾತೆಯವರು ಜಯ ರಾಮಬಾಟಿಯಿಂದ ಮರಳಿ ಬಂದ ಮೇಲೆ ನಾನು 'ಉದ್ಬೋಧನ'ಕ್ಕೆ ಹೋಗಿ ಅವರ ಚರಣಗಳ ದರ್ಶನ ಮಾಡಿ ಬಂದೆ. ಶ್ರೀಮಾತೆ ಚೆನ್ನಾಗಿ ಆಶೀರ್ವದಿಸಿದರು. ಆ ವರ್ಷ ಶ್ರೀಮಾತೆ ಯವರು ದುರ್ಗಾಪೂಜೆಗೆ ಬೇಲೂರು ಮಠಕ್ಕೆ ಬಂದಿದ್ದರು; ಕೆಲವು ದಿನ ಅಲ್ಲೇ ಇದ್ದರು. ಪೂಜೆಯ ವೇಳೆಗೆ ಜೋರಾಗಿ ಜಡಿಮಳೆ ಸುರಿಯುತ್ತಿತ್ತು; ಆದರೆ 'ಜೀವಂತ ದುರ್ಗೆ'ಯ ಉಪಸ್ಥಿತಿಯಿಂದಾಗಿ ಪೂಜೆ ನಿರ್ವಿಘ್ನವಾಗಿ ನೆರವೇರಿತು.

ಒಂದು ಸಲ ನನಗೆ ಕಾಳೀಘಾಟ್‌ಗೆ ಹೋಗಿ ಕಾಳೀಮಾತೆಯ ದರ್ಶನ ಮಾಡುವ ಇಚ್ಛೆಯುಂಟಾಗಿತ್ತು. ಈ ವಿಷಯವನ್ನು ಬಾಬುರಾಮ ಮಹಾರಾಜರಿಗೆ ತಿಳಿಸಿದಾಗ ಅವರು ಹೇಳಿದರು, '' 'ಉದ್ಬೋಧನ'ಕ್ಕೆ ಹೋಗಿ ಶ್ರೀಮಾತೆಯವರನ್ನು ಭೇಟಿಯಾಗು. ಅವರೇ ಸಾಕ್ಷಾತ್ ಕಾಳೀಮಾತೆ. ಅಲ್ಲಿಂದ ನೀನು ಕಾಳೀಘಾಟ್‌ಗೆ ಹೋಗು.'' ಬಾಗ್‌ಬಜಾರಿಗೆ ಹೋಗಿ, 'ಶ್ರೀಮಾತೆಯವರ ಮನೆ' ('ಉದ್ಬೋಧನ')ಗೆ ಹೋಗಿ, ಪ್ರಣಾಮ ಮಾಡಿದೆ. ಬಳಿಕ ಬಾಬುರಾಮ ಮಹಾರಾಜರು ಹೇಳಿದ ವಿಷಯವನ್ನು ಅವರಿಗೆ ತಿಳಿಸಿದೆ. ಅದನ್ನು ಕೇಳಿ ಶ್ರೀಮಾತೆ ತುಸು ನಕ್ಕರು. ಶ್ರೀಮಾತೆಯವರ ಆ ನಗುವಿನಲ್ಲಿ ನಾನು ಏನನ್ನು ನೋಡಿದೆನೋ ಅದು ಈಗಲೂ ನನ್ನ ಕಣ್ಣಿನ ಮುಂದೆ ಕಟ್ಟಿದಂತಿದೆ. ಅದೇನು, ದಿವ್ಯರೂಪವೆ? ಹೇಳಲು ನಾನು ಅಸಮರ್ಥನು. ಅನಂತರ ಶ್ರೀಮಾತೆ ಹೇಳಿದ್ದರು, ''ಬಾಬುರಾಮ ಸರಿ